ಕೆ.ಇ.ಬಿ.ಯಲ್ಲಿ ನಿವೃತ್ತರಾಗಿರುವ ಟೆಕ್ನಿಕಲ್ ಮೆಂಬರನ್ನು ವಿದೇಶಕ್ಕೆ ಅಧ್ಯಯನ ಪ್ರವಾಸ ಕಳುಹಿಸುತ್ತಿರುವ ಕುರಿತು.

ಶ್ರೀ ವೈ. ರಾಮಕೃಷ್ಣ : ಮಾನ್ಯ ಅಧ್ಯಕ್ಷರೇ, ನನ್ನ ಕೈಯಲ್ಲಿ ಒಂದು ಸರ್ಕಾರದ ಆದೇಶ ಇದೆ. ಈ ಸರ್ಕಾರದ ಆದೇಶದ ಪ್ರಕಾರ ಕೆ.ಇ.ಬಿ. ಯಲ್ಲಿರುವ ಒಬ್ಬ ಟೆಕ್ನಿಕಲ್ ಮೆಂಬರ್ ಅನ್ನು ತಾವು ಫಾರಿನಗೆ ಕಳುಹಿಸುತ್ತಿದ್ದೀರಿ. ಅದಕ್ಕೆ ನನ್ನ ಅಬ್ಜೆಕ್ಷನ್ ಇಲ್ಲ. ಆದರೆ ಅವರು ಒಂದು ತಿಂಗಳೊಳಗೆ ರಿಟೈರ್ಡ್ ಆಗತ್ತಿದ್ದಾರೆ, ಅಂತಹವರನ್ನು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಸ್ಪಡೀ ಟೂರಗೆ ಎಂದು ಬೀಜಿಂಗ್, ಶಾಂಗೈ, ಚೈನಾ ಮುಂತಾದ ದೇಶಗಳಿಗೆ ಕಳುಹಿಸಿಕೊಡುತ್ತಿದ್ದಾರೆ. ಇದು ವೇಸ್ಟ. ಆದುದರಿಂದ ಕಾನೂನು ಇದ್ದರೂ ಕೂಡ ರಿಟೈರ್ಡ್ ಆಗುವವರನ್ನು ಕಳುಹಿಸಿಬಾರದು ಎಂದು ನಿಯಮಾವಳಿ ಇದ್ದರೂ ಕೂಡ ಅದಕ್ಕೆ ವಿರುದ್ಧವಾಗಿ ಕಳುಹಿಸುತ್ತಿದ್ದಾರೆ ಇನ್ನು ಬೇರೆ ಯಾರಿಗಾದರೂ ಸರ್ವೀಸನಲ್ಲಿ ಇರುವವರಿಗೆ ಕಳುಹಿಸಬೇಕೇ ಹೊರತು ಇಂತಹ ಕೆಲಸ ತಾವು ಮಾಡಬಾರದು ಎಂದು ಕೇಳುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಇದು ಗೊತ್ತಾಗಿದೆ. ನಾನು ಇದನ್ನು ಸಂಬಂಧಪಟ್ಟ ಸಚಿವರ ಗಮನಕ್ಕೆ ತರುತ್ತೇನೆ.

ಶ್ರೀ ವೈ. ರಾಮಕೃಷ್ಣ : ಇದು ವೇಸ್ಟ, ಟೂರ್‌ಗೆ ಹೋಗುತ್ತಿರುವವರು ಮುಂದಿನ ತಿಂಗಳು ರಿಟೈರ್ ಆಗುತ್ತಿದ್ದಾರೆ.

MR. SPEAKER : The Government has to take up a collective responsibility here.

ಶ್ರೀ ಸಿ. ಬೈರೇಗೌಡ : ನನ್ನ ಹತ್ತಿರ ಪೂರ್ಣ ಮಾಹಿತಿ ಇಲ್ಲ.

MR. SPEAKER : It is a collective responsibility of the Government. If the said Technical Member of the KEB is going to retire within a month or so, where is the fun in spending lakhs of rupees on his foreign visit. It would become a pleasure trip for him. The Government should revise its decision.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಇದನ್ನು ನಾನು ಸಂಬಂಧಪಟ್ಟ ಮಾನ್ಯ ಮಂತ್ರಿಗಳ ಗಮನಕ್ಕೆ ತುರುತ್ತೇನೆ.

ಶ್ರೀಮತಿ ಪ್ರಮೀಳ ನೇಸರ್ಗಿ : ಮಾನ್ಯ ಅಧ್ಯಕ್ಷರೇ, ನಾನು ಪ್ರಸ್ತಾಪ ಮಾಡುವ ಮುಖ್ಯ ವಿಷಯವೆಂದರೆ, ನಿನ್ನೆ ಪೇಪರನಲ್ಲೂ ಬಂದಿದೆ, ನಾಳೆ ನಡೆಯತಕ್ಕಂಥ ಕ್ರಿಕೆಟನಲ್ಲಿ ರಾಷ್ಟ್ರ ಧ್ವಜವನ್ನು ತೆಗೆದುಕೊಂಡು ಹೋಗಬಾರದು ಎಂದು ಇದೆ. ನಾನು ಬಹಳ ದುಃಖದಿಂದ ಕೇಳುತ್ತಿದ್ದೇನೆ....

ಅಧ್ಯಕ್ಷರು : ಯಾರು ಹೇಳಿದ್ದಾರೆ? This House cannot sit on discussions on any presumptions or assumptions and the publications in newspapers do not become authenticity for us.

ಶ್ರೀಮತಿ ಪ್ರಮೀಳಾ ನೇಸರ್ಗಿ : ಇದು ಪೇಪರನಲ್ಲೂ ಕೂಡ ಬಂದಿದೆ.

ಅಧ್ಯಕ್ಷರು : ಈ ದೇಶದ ಪ್ರಜೆ ಎಲ್ಲಿ ಬೇಕಾದರೂ ರಾಷ್ಟ್ರಧ್ವಜವನ್ನೂ ಹೆಮ್ಮೆಯಿಂದ ತೆಗೆದುಕೊಂಡು ಹೋಗಬಹುದು. ಅದರ ಬಗ್ಗೆ ಹೆಚ್ಚು ಚರ್ಚೆ ಬೇಡ.

ಶಾಸನ ರಚನೆ

ಮೈಸೂರು (ವೈಯುಕ್ತಿಕ ಮತ್ತು ಸಂಕೀರ್ಣ) ಇನಾಮುಗಳ ರದ್ದಿತಿ (ತಿದ್ದುಪಡಿ) ವಿಧೇಯಕ 1996

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1996ರ ಮೈಸೂರು(ವೈಯಕ್ತಿಕ ಮತ್ತು ಸಂಕೀರ್ಣ) ಇನಾಮುಗಳ ರದ್ದಿಯಾತಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೊರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

+ ಶ್ರೀ ಆರ್. ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಈ ಒಂದು ಇನಾಮತಿ ಜಮೀನುಗಳು, ಅದರಲ್ಲಿರುವ ಮರ ಮತ್ತು ಇತರೆ ನೈಸರ್ಗಿಕ ಸಂಪತ್ತನ್ನು ಕಾಪಾಡುವುದಕ್ಕೆ ಹಿಂದೆ ಒಂದು ಬಿಲ್‌ನ್ನು ಪಾಸ್ ಮಾಡಿ ಇದನ್ನು ಸನ್ಮಾನ್ಯ ರಾಷ್ಟ್ರಪತಿಗಳಿಗೆ 1992ರಲ್ಲಿ ಕಳುಹಿಸಿದರು. ಆದರೆ ಅದು ಕಾನೂನು ಬದ್ಧವಾಗಿಲ್ಲ, ರಾಜ್ಯಾಂಗಬದ್ಧವಾಗಿಲ್ಲ ಎಂದು ಸರ್ಕಾರಕ್ಕೆ ವಾಪಸ್ಸು ಬಂದಿತ್ತು. ನಂತರ 1994ರಲ್ಲಿಯೂ ಸಹ ತರಹದ ಒಂದು ಬಿಲ್ಲನ್ನು ಮಾಡಿ ಮತ್ತೆ ಕಳುಹಿಸಿ ಕೊಡಲಾಗಿತ್ತು. ಅದೂ ಸಹ ವಾಪಸ್ಸು ಬಂತು. ಆದರೆ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಆಸ್ತಿಯನ್ನು ಸಂರಕ್ಷಣೆ ಮಾಡುವುದಕ್ಕೋಸ್ಕರ ಈ ಒಂದು ವಿಧೇಯಕವನ್ನು ಇಲ್ಲಿ ಈಗ ಮಂಡಿಸಿದ್ದೇನೆ. ಹಿಂದೆ ಇದರ ಬಗ್ಗೆ ಈ ಸದನಲ್ಲಿ ಬಹಳಷ್ಟು ಚರ್ಚೆಯಾಗಿದೆ. ಸನ್ಮಾನ್ಯ ಕಾಗೋಡು ತಿಮ್ಮಪ್ಪನವರು, ಮಾನ್ಯ ಖಿರ್ಗೆಯವರು ಹಾಗೂ ಮಾನ್ಯ ಯಡಿಯೂರಪ್ಪನವರು ಸಹ ಇದರ ಬಗ್ಗೆ ಬಹಳಷ್ಟು ಚರ್ಚೆ ಮಾಡಿ ಈ ಬಿಲ್‌ನ್ನು ಒಪ್ಪಿಕೊಂಡಿದ್ದಾರೆ. ಯಾವುದೇ ವಿಧವಾದ ಕೋರ್ಟ್ ಆರ್ಡರ್ ಇರಲಿ, ಅಗ್ರಿಮೆಂಟ್ ಇರಲಿ, ಏನೇ ಇರಲಿ, 14 'ಎ' ನಾವೇನು ಅಮೆಂಡ್‌ಮೆಂಟ್ ಸೂಚನೆ ಮಾಡಿದ್ದೇವೆ ಅದರ ಮೂಲಕ ಅಂತಹ ಕಟ್ಟುಪಾಡುಗಳಿಗೆ ಸರ್ಕಾರ ಬದ್ಧವಾಗಿಲ್ಲ. ಮತ್ತು ಸರ್ಕಾರ ಯಾವುದೇ ರೀತಿಯ ರಿಲೀಫ್ ಕೊಡುವುದಕ್ಕೂ ಕೂಡ ಬದ್ಧವಲ್ಲ ಇದರ ಬಗ್ಗೆ ಕೋರ್ಟಿನಲ್ಲಿ ಯಾವುದೇ ಒಂದು